# ಕರ್ನಾಟಕ ವಿಧಾನ ಪರಿಷತ್ತು

## ನೂರ ನಲವತ್ತ ಮೂರನೆಯ ಅಧಿವೇಶನದ ಮುಂದುವರೆದ ಉಪವೇಶನ

## ಚುಕ್ಕೆ ರಹಿತ ಪ್ರಶ್ನೆ

ದಿನಾಂಕ : 12-03-2021 ಪ್ರಶ್ನೆ ಸಂಖ್ಯೆ : 891 (1112)

ಸದಸ್ಯರ ಹೆಸರು ಮತ್ತು ಕ್ಷೇತ್ರ : ಶ್ರೀ ಹೆಚ್.ಎಂ. ರಮೇಶ್ ಗೌಡ (ವಿಧಾನಸಭೆಯಿಂದ ಚುನಾಯಿತರಾದವರು)

ಉತ್ತರ ನೀಡಬೇಕಾದ ದಿನಾಂಕ : 12-03-2021

ಉತ್ತರಿಸುವ ಸಚಿವರು : ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು

ವಿಷಯ : ಬೆಂಗಳೂರು ಉತ್ತರ ತಾಲ್ಲೂಕಿನಲ್ಲಿ ನಡೆದಿರುವ ಅವ್ಯವಹಾರ ಕುರಿತು

(ಅ) ಬೆಂಗಳೂರು ಉತ್ತರ ತಾಲ್ಲೂಕಿನಲ್ಲಿ ಇ-ಖಾತೆ ನೀಡುವಲ್ಲಿ ವ್ಯಾಪಕ ಭ್ರಷ್ಟಾಚಾರ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮವೇನು ; ಕೈಗೊಳ್ಳದಿದ್ದಲ್ಲಿ, ಯಾವ ಕಾಲಮಿತಿಯಲ್ಲಿ ಕ್ರಮ ಕೈಗೊಳ್ಳಲಾಗುವುದು ;

(ಆ) ದಿನಾಂಕ : 01-01-2020 ರಿಂದ ದಿನಾಂಕ :01-03-2021ರ ವರೆಗೆ ಬೆಂಗಳೂರು ಉತ್ತರ ತಾಲ್ಲೂಕಿನಲ್ಲಿ ಸೃಜನೆಯಾದ ಇ-ಸ್ವತ್ತು ಖಾತಾಗಳ ಸಂಖ್ಯೆ ಮತ್ತು ಸ್ವತ್ತಿನ ಐಡಿ ಎಷ್ಟು ; (ಎನ್.ಐ.ಸಿ. ವತಿಯಿಂದ ಪಂಚಾಯತಿವಾರು ವಿವರ ನೀಡುವುದು)

(ಇ) ನಮೂನೆ - 9 ಮತ್ತು ನಮೂನೆ - 11 ಬಿ ಗಾಗಿ ಗ್ರಾಮ ಪಂಚಾಯತಿಯವರು ಆಸ್ತಿ ಮಾಲೀಕರಿಂದ ಪಡೆದ ದಾಖಲೆಗಳ ಪ್ರತಿ ಹಾಗೂ ಗ್ರಾಮ ಪಂಚಾಯತಿಯವರು ನಿರ್ವಹಿಸಿದ ದಾಖಲೆಗಳಾದ ನಡಾವಳಿ ಪ್ರತಿ, ಮ್ಯುಟೇಷನ್ ಪ್ರತಿ, ಗ್ರಾಮ ಪಂಚಾಯತಿವಾರು ಪ್ರತಿ ಆಸ್ತಿಗೂ ಪ್ರತ್ಯೇಕವಾಗಿ ನೀಡುವುದು ;

(ಈ) ಹಲವು ಇ-ಸ್ವತ್ತು ಖಾತಾಗಳು ಕಾನೂನುಬಾಹಿರವಾಗಿ ಹಣ ಪಡೆದು 11ಬಿ ನೀಡಬೇಕಾದ ಖಾತಾಗಳಿಗೆ ನಮೂನೆ-9ನ್ನು ನೀಡಿರುವುದು, ಇ-ಖಾತಾ ನೀಡಲು ಅರ್ಹವಲ್ಲದ ಸ್ವತ್ತಿಗೂ ಸಹ ಇ-ಖಾತಾ ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಇದರಲ್ಲಿ ಭಾಗಿಯಾದ ಅಧಿಕಾರಿಗಳ ಮೇಲೆ ಸರ್ಕಾರ ಕೈಗೊಂಡ ಕ್ರಮವೇನು ;

(ಉ) ಇ-ಖಾತಾಗಳ ಸೃಜನೆಗಾಗಿ ಎಸ್.ಡಿ.ಎ, ಕಾರ್ಯದರ್ಶಿ, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಮತ್ತು ಕಾರ್ಯನಿರ್ವಾಹಕ ಅಧಿಕಾರಿಗಳು ಡಿಜಿಟಲ್ ಸಹಿ/ಥಂಬ್ ನೀಡಲು ಬಳಸಿದ ಕಂಪ್ಯೂಟರ್‌ನ ಐ.ಪಿ. ಅಡ್ರೆಸ್ ಪ್ರತಿ ಸ್ವತ್ತಿಗೆ ಪ್ರತ್ಯೇಕವಾಗಿ ವಿವರ ನೀಡುವುದು ಮತ್ತು ಸದರಿ ಐ.ಪಿ. ಅಡ್ರೆಸ್ ಯಾವ ಕಾರ್ಯಾಲಯಕ್ಕೆ ಸೇರಿದೆ ? (ಸಂಪೂರ್ಣ ವಿವರ ನೀಡುವುದು)